

## ಬ್ರೂನೋ

‘ಬ್ರೂನೋ’ (ವೈ. ಬಿ.ಎಚ್. ಜಯದೇವ್, ಜು. 21) ಅನುಭವ ಕಥನ ಚೆನ್ನಾಗಿತ್ತು. ಇದನ್ನು ಓದಿದಾಗ ನಮ್ಮ ತಂದೆ ಸಾಕಿದ್ದ ನಾಯಿ ಜ್ಞಾಪಕ ಬಂತು. ನಾನು ಎಂಟ್ಟತ್ತು ವರ್ಷದವನಿದ್ದಾಗ ಎರಡು ದಿನದ ಮರಿಯನ್ನು ತಂದು ಅದಕ್ಕೆ ಹತ್ತಿಯಲ್ಲಿ ಹಾಲು ಅದ್ದಿ ಕುಡಿಸುತ್ತಿದ್ದರು. ಅವರು ಸತ್ತ ಮೇಲೆ ಅದಕ್ಕೆ ಒಂದು ರೀತಿ ಹುಚ್ಚು ಹಿಡಿಯಿತು. ನಮ್ಮಣ್ಣ ಸ್ಥಳ ಬದಲಾದರೆ ಸರಿ ಹೋದೀತೆಂದು ಗುರುತಿನವರ ತೋಟದಲ್ಲಿ ಬಿಟ್ಟು ಬಂದ. ಆದರೆ ಅದು ಒಂದೇ ವಾರದಲ್ಲಿ ಸತ್ತು ಹೋಯಿತು. ಅದಕ್ಕೇ ನಿಯತ್ತಿಗೆ ಇನ್ನೊಂದು ಹೆಸರು ನಾಯಿ ಎನ್ನುವುದು. ನನ್ನ ಚಿಕ್ಕಂದಿನ ಅನುಭವ ನೆನಪಿಸಿದ, ಒಳ್ಳೆಯ ಓದಿನ ಖುಷಿಯನ್ನು ಕೊಟ್ಟ ಲೇಖಕರಿಗೆ ಧನ್ಯವಾದಗಳು.

—ಎಸ್. ವಿ. ಗೋಪಾಲ್ ರಾವ್, ಬೆಂಗಳೂರು

ಅನುಭವ ಕಥನ ತುಂಬಾ ಮನೋಜ್ಞವಾಗಿ ಮೂಡಿಬಂದಿದೆ. ಮನೆಯ ಮಕ್ಕಳಿಗಿಂತ ಮಿಗಿಲಾದ ಪ್ರೀತಿಯನ್ನು ಬ್ರೂನೋ ಸಂಪಾದಿಸುವುದು ಅಚ್ಚರಿಯ ಸಂಗತಿ. ನಿರೂಪಣೆ ಬಹಳ ಕೌತುಕವಾಗಿದೆ.

—ರಾಮಮೂರ್ತಿ ವಿ.ಎಸ್., ಬೆಂಗಳೂರು

ಅನುಭವ ಕಥನ ನಮ್ಮ ಮನೆಯಲ್ಲೇ ನಡೆದ ಘಟನೆಯಂತೆ ಭಾಸವಾಗಿ ಮನಮುಟ್ಟಿತು. ಕಣ್ಣಂಚನ್ನು ತೇವಗೊಳಿಸಿತು.

—ಚಂದ್ರಶೇಖರ ಕೆ., ಬೆಂಗಳೂರು

## ಹಲ್ಲಿ ಬೇಟೆ



‘ಹಲ್ಲಿ ಬೇಟೆ’ (ವಾಸುದೇವ ಶರ್ಮಾ ಎನ್.ವಿ., ಜು. 28) ಪ್ರಬಂಧ ತುಂಬ ಚೆನ್ನಾಗಿತ್ತು. ಲಘು ಶೈಲಿಯ ಬರವಣಿಗೆ ಸರಾಗವಾಗಿ ಓದಿಸಿಕೊಂಡು ಹೋಗುವ ಹಾಗಿದೆ. ನಮ್ಮ ಅನುಭವವನ್ನೇ ಲೇಖಕರು ಬರೆದಿದ್ದಾರೇನೋ ಅನ್ನಿಸುವಷ್ಟು ಆಪ್ತವಾಯ್ತು. ಲೇಖನದ ವಿನ್ಯಾಸವೂ ವಿಶೇಷವಾಗಿತ್ತು.

—ಆಯೇಷಾ, ಯಲ್ಲಾಪುರ

ಹಲ್ಲಿಯಿಲ್ಲದ ಮನೆಯುಂಟೆ? ಎಲ್ಲರ ಮನೆಯ ದೋಸೆಯೂ ತೂತೇ ಎನ್ನುವ ಹಾಗೆ ಎಲ್ಲರ ಮನೆ ಗೋಡೆಯಲ್ಲಿಯೂ ಹಲ್ಲಿ ಇರುತ್ತದೆ ಎಂದು ಹೇಳಬಹುದು. ಹಾಗೆ ಎಲ್ಲರ ಅನುಭವವನ್ನು ವಿಶಿಷ್ಟವಾಗಿ ಲೇಖಕರು ಈ ಪ್ರಬಂಧದಲ್ಲಿ ಕಟ್ಟಿಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳು.

—ಚಂದ್ರಕಾಂತ ಡಿ.ವಿ., ಜೋಯಿಡಾ

ಲೇಖಕರೇ ಇದು ಹುಲಿಬೇಟೆಯಲ್ಲ, ಸಾಮಾನ್ಯವಾದ ಹಲ್ಲಿ ಬೇಟೆ ಎಂದು ಹೇಳಿಕೊಂಡಿದ್ದಾರೆ. ಹುಲಿ ಬೇಟೆ ಈಗಂತೂ ಅಸಾಧ್ಯವೇ ಸರಿ. ಮತ್ತದನ್ನು ನಾವೇ ಹುಡುಕಿಕೊಂಡು ಹೋಗಬೇಕು. ಆದರೆ ನಮ್ಮನ್ನು ಹುಡುಕಿಕೊಂಡು ಬರುವ, ನಮ್ಮ ಜೊತೆಗೇ ಇರುವ ಹಲ್ಲಿಗಳ ಬೇಟೆ ಕೆಲವೊಮ್ಮೆ ಅನಿವಾರ್ಯವೂ ಆಗುತ್ತದೆ. ಅವು ಹುಲಿಗಿಂತಲೂ ನಮ್ಮನ್ನು ಇಕ್ಕಟ್ಟಿಗೆ ಸಿಲುಕಿಸಬಲ್ಲವು.

—ತಾರುಣ್ಯಾ ಪ್ರಕಾಶ್, ಮೈಸೂರು

‘ಹಲ್ಲಿ ಬೇಟೆ’ ಪ್ರಬಂಧವು ಪರಿವಿಡಿಯಲ್ಲಿ ಕಥೆ ಅಂತಲೂ, ಒಳಪುಟದಲ್ಲಿ ಪ್ರಬಂಧ ಅಂತಲೂ ಮುದ್ರಿತವಾಗಿದೆ.

—ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

## ಹಕ್ಕಿಗಳ ಮಡಿಲು ಗೋಣಿ

‘ನೂರಾರು ಹಕ್ಕಿಗಳಿಗೆ ಮಡಿಲಾಗುವ ಗೋಣಿ’ (ವಿನು ಗಂಗೆ, ಜು. 21) ಲೇಖನ ಮನಸ್ಸಿಗೆ ಮುದವನ್ನು ಕೊಟ್ಟಿತು. ನಮ್ಮ ಮಕ್ಕಳಿಗಾಗಿ ಮರಗಳನ್ನು ಉಳಿಸುವ, ಬೆಳೆಸುವ ಅವರ ಮಾತು ಮೆಚ್ಚುವಂಥದ್ದು ಅಲ್ಲವೇ? ನಾವೂ ಈ ನಿಟ್ಟಿನಲ್ಲಿ ನಮ್ಮ ಪರಿಮಿತಿಯಲ್ಲಿ ಸಾಧ್ಯವಿದ್ದಷ್ಟೂ ಪ್ರಯತ್ನ ಮಾಡಬೇಕಲ್ಲವೇ?

—ನಾಗಸುಧ, ಮೈಸೂರು

ವಿನು ಗಂಗೆ ಅವರ ಆಶಯಕ್ಕೆ ನಾವೆಲ್ಲರೂ ಮರಗಿಡಗಳನ್ನು ರಕ್ಷಿಸುವುದರ ಮೂಲಕ ಬೆಂಬಲಿಸಬೇಕು. ಮರಗಿಡಗಳ ಬಗ್ಗೆ ತಿಳಿವಳಿಕೆ ಬೆಳೆಸಿಕೊಂಡರೆ ಅವುಗಳ ಸಂರಕ್ಷಣೆ ಸುಲಭ. ಮರಗಿಡ ಬೆಳೆಸಿದರೆ ಸಾಲದು ಅವುಗಳ ಸಂರಕ್ಷಣೆ, ಪೋಷಣೆ ಒಂದು ಜವಾಬ್ದಾರಿ. ಅದನ್ನು ಮುತುವರ್ಜಿಯಿಂದ ಮಾಡಿದರೆ ಮುಂದಿನ ದಿನಗಳ ಬಗ್ಗೆ ಚಿಂತಿಸುವ ಅಗತ್ಯವಿಲ್ಲ.

—ಸುನೀತ ಜಿ. ರಮೇಶ್

## ವಿದ್ಯಾಸಾಗರ ಬಾಲಪುರಸ್ಕಾರ

ಶಹಾಪುರದ ಸಂಧ್ಯಾ ಸಾಹಿತ್ಯ ವೇದಿಕೆಯು 16 ವರ್ಷದೊಳಗಿನ ಬಾಲ ಬರಹಗಾರರಿಗೆ ‘ವಿದ್ಯಾಸಾಗರ ಬಾಲ ಪುರಸ್ಕಾರ’ಕ್ಕೆ ಅರ್ಜಿ ಆಹ್ವಾನಿಸಿದೆ. ಪುರಸ್ಕಾರ ₹ 5000 ರೂಪಾಯಿ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. ಒಂದು ಸಂಕಲನಕ್ಕಾಗುವಷ್ಟು ಪ್ರಕಟಿತ ಅಥವಾ ಅಪ್ರಕಟಿತ ಕನ್ನಡ ಬರಹಗಳನ್ನು ಕಳುಹಿಸಬಹುದು. ಕತೆ, ಕವಿತೆ, ಲಲಿತ ಬರಹ, ಪ್ರವಾಸ ಕಥನ, ನಾಟಕ ಹೀಗೆ ಯಾವುದೇ ಪ್ರಕಾರದಲ್ಲೂ ಬರವಣಿಗೆ ಇರಬಹುದಾಗಿದೆ. ಜನ್ಮದಿನಾಂಕ ದೃಢೀಕರಣ ಮತ್ತು ಫೋಟೊ ಕಡ್ಡಾಯ. ಕೊನೆಯ ದಿನಾಂಕ: ಅ. 10. ವಿಳಾಸ: ರವಿ ಹಿರೇಮಠ, ಅಧ್ಯಕ್ಷರು, ಸಂಧ್ಯಾ ಸಾಹಿತ್ಯ ವೇದಿಕೆ, ಅಮೃತ ನಿವಾಸ, ಸಿ.ಬಿ.ಕಮಾನಿನ ಹತ್ತಿರ, ಶಹಾಪುರ 585 223
ಹೆಚ್ಚಿನ ಮಾಹಿತಿಗಾಗಿ: 9448651520/ 9986590894.

## ವಿಠ್ಠಲ ವಿಠ್ಠಲ ಪಾಂಡುರಂಗ



‘ವಿಠ್ಠಲ ವಿಠ್ಠಲ ಪಾಂಡುರಂಗ’ (ಶ್ರೀನಿವಾಸ ಜೋಕಟ್ಟೆ, ಜು. 28) ಲೇಖನ ಓದಿದಾಗ ನಾನು 1974ನೇ ಇಸವಿಗೆ ಮರಳಿ ಹೋದೆ. ಉದ್ಯೋಗ ನಿಮಿತ್ತ ಸಂಕೇಶ್ವರ ಊರಿನಲ್ಲಿ ಇದ್ದ ನಾನು ಪಂಡರಪುರಕ್ಕೆ ಹೋಗಿ ಸ್ವಾಮಿ ದರುಶನ ಮಾಡಿದೆ. ಮೂರ್ತಿಯ ಎದುರು ಹೋಗಿ, ಆತನ ವದನಾರವಿಂದ ನೋಡುತ್ತಿದ್ದಂತೆ ನಾನು ಇಹವನ್ನೇ ಮರೆತಂತೆ ಅಲ್ಲೇ ನಿಂತುಬಿಟ್ಟೆ! ಆ ಪರಿಯ ಆಕರ್ಷಣೆ ಆ ಮೂರ್ತಿಗಿತ್ತು. ನಿಜಕ್ಕೂ ವಿಠ್ಠಲನಿಗೆ ವಿಠ್ಠಲನೇ ಸಾಟಿ.

—ಪಿ ವಾಸುದೇವ್ ಭಟ್, ಉಡುಪಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in